ಅ.ದಾ. 118/2021 ಪಿಡಬ್ಲ್ಯೂ-1

ದಿನಾಂಕಃ 04.02.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ ಎನ್.ಎಸ್.ಜೆ. ವಕೀಲರಿಂದ:**

ಈ ದಾವೆಯನ್ನು ದಾಖಲಿಸಿದ ನಂತರ ಪ್ರತಿವಾದಿಯವರ ವಿರುದ್ಧ ಒಂದು ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ಪ್ರಸ್ತುತ ದಾವೆಯಲ್ಲಿ ಪ್ರತಿವಾದಿಯವರ ವಿರುದ್ಧ ನಿರ್ಭಂದಕಾಜ್ಞೆ ಆದೇಶವನ್ನು ಪಡೆಯುವ ಉದ್ದೇಶದಿಂದ ಪ್ರತಿವಾದಿಯವರ ವಿರುದ್ಧ ಸುಳ್ಳು ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣವು ಚಾಲ್ತಿಯಲ್ಲಿರುವ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಸ.ನಂ.248 ರ ಮೂಲ ಸ.ನಂ.248 ಪಿ ಆಗಿರುತ್ತದೆ. ಸದರಿ ಸ.ನಂ. ನಲ್ಲಿರುವ 3 ಎಕರೆ ಮತ್ತು 2 ಎಕರೆ 38 ಗುಂಟ ಜಮೀನಿನ ಪೋಡಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಪೋಡಿಯಾದರೆ ಪ್ರತ್ಯೇಕವಾದ ಪಹಣಿಗಳು ಬರುತ್ತವೆ ಎಂದರೆ ಸಾಕ್ಷಿಯು ನನಗೆ ಅದರ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಒಂದು ಜಮೀನಿನಲ್ಲಿ ಹಲವು ಪೋಡಿಯಾದರೆ ಅವುಗಳಿಗೆ ಪ್ರತ್ಯೇಕವಾದ ಹಿಸ್ಸಾ ಸಂಖ್ಯೆಯನ್ನು ಕೊಡುತ್ತಾರೆ ಎಂದರೆ ಸಾಕ್ಷಿಯು ನನಗೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ-2 ರ ಪ್ರಕಾರ 3 ಎಕರೆ ಮತ್ತು 2 ಎಕರೆ 38 ಗುಂಟೆಯ ಜಮೀನು ಒಂದೇ ಪಹಣಿಯಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಪೂರ್ತಿ ಜಮೀನು ನನ್ನ ಹೆಸರಿನಲ್ಲಿಯೇ ಇರುತ್ತದೆ ಎಂದು ನುಡಿಯುತ್ತಾರೆ.

ಸ.ನಂ.248 ರ ಜಮೀನು ಮೂಲತಃ ಯಾರಿಗೆ ಮಂಜೂರಾಗಿರುತ್ತದೆ ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ವಿಷಯದ ಕುರಿತು ದಾಖಲಾತಿಯನ್ನು ಹಾಜರುಪಡಿಸಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಈ ಹಿಂದೆ ಜಮೀನನ್ನು ಮಂಜೂರು ಮಾಡುವಾಗ ಖಾಯಂ ಆಗಿ ಹಂಗಾಮಿಯಾಗಿ, ತಾತ್ಕಾಲಿಕ ಅವಧಿಗೆ ಮಂಜೂರು ಮಾಡುತ್ತಿದ್ದರು ಎಂದರೆ ಸಾಕ್ಷಿಯು ನನ್ನ ತಂದೆಯ ಕಾಲದಲ್ಲಿ ಮಂಜೂರಾಗಿರುವ ಕಾರಣ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-2 ರ ಪ್ರಕಾರ ಸ.ನಂ.248 ರ ಜಮೀನು ಲೀಸ್ ಬೇಸಿಸ್ ಮೇಲೆ ಮಂಜೂರಾಗಿರುವುದು ಕಂಡುಬರುತ್ತದೆ ಎಂದರೆ ಸಾಕ್ಷಿಯು ಮಂಗಳೂರು ಬೆಂಗಳೂರು ಪೈಪ್ ಲೈನ್ ಹಾದುಹೋಗಿರುವ ಬಗ್ಗೆ ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-2 ರಲ್ಲಿ 3 ಎಕರೆ ಜಮೀನಿನಲ್ಲಿ ಪೈಪ್ ಲೈನ್ ಹಾದುಹೋಗಿರುವ ಬಗ್ಗೆ ನಮೂದಿರುತ್ತದೆ ಎಂದರೆ ಸಾಕ್ಷಿಯು ಎಮ್.ಆರ್ ನ್ನು ತೆಗೆದುನೋಡಿದರೆ ತಿಳಿದು ಬರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯವರು ತಿರುಗಾಡುವ ರಸ್ತೆಗೆ ಅಡ್ಡಿಪಡಿಸುವ ಕಾರಣ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಆದ ಕಾರಣ ರಸ್ತೆಗೆ ಯಾವುದೇ ಅನುದಾನವನ್ನು ನೀಡಬಾರದು ಎಂದು ಜಿಲ್ಲಾ ಪಂಚಾಯ್ತಿಗೆ ಮತ್ತು ತಾಲ್ಲೂಕು ಪಂಚಾಯ್ತಿಗೆ ಮನವಿಯನ್ನು ನೀಡಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಜಮೀನಿನ ಕುರಿತು ನೀಡಿರುತ್ತೇನೆ ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ ಸರ್ಕಾರಿ ಜಮೀನಿನಲ್ಲಿ ರಸ್ತೆಗಾಗಿ ಜಮೀನಿದ್ದರೆ ಹಿಡುವಳಿದಾರರು ಅದಕ್ಕೆ ಯಾವುದೇ ತೊಂದರೆ ಮಾಡಬಾರದು ಎಂದರೆ ಸಾಕ್ಷಿಯು ರಸ್ತೆಯು ಸ.ನಂ.249 ರ ಸರ್ಕಾರಿ ಜಮೀನಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯವರಿಗೆ ಮತ್ತು ಇತರೆ ಗ್ರಾಮಸ್ಥರಿಗೆ ತಿರುಗಾಡದಂತೆ ಮಾಡಲು ನಮ್ಮ ಜಮೀನಿನ ಬೇಲಿಯನ್ನು ತೆಗೆಯದೆ ರಸ್ತೆಗೆ ಬೀಳುವಂತ ಬಿಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಷಯದ ಕುರಿತು ಸ್ಥಳೀಯ ಪಂಚಾಯ್ತಿಯವರು ರಸ್ತೆಗೆ ಬಿದ್ದಿರುವ ಗಿಡಗಳನ್ನು ತೆರವುಗೊಳಿಗೆ ಸಾರ್ವಜನಿಕರಿಗೆ ತಿರುಗಾಡಲು ತೊಂದರೆ ಕೊಡಬಾರದು ಎಂದು ನೋಟೀಸನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಆದ ಕಾರಣ ಪ್ರತಿವಾದಿಯವರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾಖಲಿಸುವ ದೂರಿನಲ್ಲಿ ಪ್ರತಿವಾದಿಯವರು ಬೇಲಿಯನ್ನು ತೆರವುಗೊಳಿಸಲು ಜೆ.ಸಿ.ಬಿ ಯನ್ನು ಉಪಯೋಗಿಸುತ್ತಿರುತ್ತಾರೆ ಎಂದು ದೂರನ್ನು ನೀಡಿರುತ್ತೀರ ಎಂದರೆ ಸಾಕ್ಷಿಯು ನನ್ನ ಜಮೀನಿನ ಕಾಫೀ ಗಿಡಗಳನ್ನು ನಾಶ ಮಾಡುತ್ತಿರುತ್ತಾರೆ ಎಂದು ದೂರು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಕ್ರಿಮಿನಲ್ ಪ್ರಕರಣ 231/2022 ರಲ್ಲಿ ನ್ಯಾಯಾಲಯದ ಮುಂದೆ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಸಿಸಿ.231/2022 ರಲ್ಲಿ ನಾನು ನುಡಿದಿರುವ ಸಾಕ್ಷಿಯ ದೃಢೀಕೃತ ನಕಲು ಎಂದು ಗುರುತಿಸಿದ ಮೇರೆಗೆ ಸದರಿ ದಾಖಲಾತಿಯನ್ನು ನಿಡಿ-1 ಎಂದು ಗುರುತಿಸಲಾಯಿತು.

ಈ ದಾವೆ ಹೂಡಲು ಯಾವುದೇ ವ್ಯಾಜ್ಯ ಕಾರಣ ಇಲ್ಲದಿದ್ದರೂ ಪ್ರತಿವಾದಿಯವರಿಗೆ ತೊಂದರೆಕೊಡುವ ಉದ್ದೇಶದಿಂದ ಈ ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. ರಸ್ತೆಯ ಮೇಲೆ ಬಾಗಿ ಬೆಳೆದಿರುವಂತಹ ಕಟ್ಟಿಂಗ್ಸ್ ಬೇಲಿಯನ್ನು ತೆರವುಗೊಳಿಸಬಾರದು ಮತ್ತು ಗ್ರಾಮ ಪಂಚಾಯ್ತಿಯವರ ಕರ್ತವ್ಯಕ್ಕೆ ಅಡ್ಡಿಪಡಿಸುವ ಉದ್ದೇಶದಿಂದ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರಿಗೆ ಈ ದಾವೆಯಲಿ ತಿಳಿಸಿರುವ ರಸ್ತೆಯನ್ನು ಹೊರತುಪಡಿಸಿ ಇತರೆ ಪ್ರತ್ಯೇಕ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸರ್ಕಾರಿ ಜಾಗದಲ್ಲಿ ರಸ್ತೆ ಇದೆ ಎಂದು ನುಡಿಯುತ್ತಾರೆ. ಪಂಚಾಯ್ತಿಯವರು ನಿರ್ವಹಣೆ ಮಾಡುತ್ತಿರುವ ರಸ್ತೆಯನ್ನೇ ಕಾಲುದಾರಿ ಎಂದು ತೋರಿಸಿ ಸುಳ್ಳು ಚೆಕ್ಕುಬಂದಿಯನ್ನು ನಮೂದಿಸಿರುತ್ತೇನೆ ಎಂದರೆ ಸಾಕ್ಷಿಯು ಈ ಹಿಂದೆ ಸದರಿ ರಸ್ತೆಯು ಕಾಲುದಾರಿ ರಸ್ತೆಯಾಗಿತ್ತು ಸದರಿ ರಸ್ತೆಯನ್ನು ಪ್ರಸ್ತುತವಾಗಿ ಅಗಲ ಮಾಡಿಕೊಳ್ಳಲಾಗಿದೆ ಎಂದು ನುಡಿಯುತ್ತಾರೆ. ನಾನು ಸುಳ್ಳು ಚೆಕ್ಕುಬಂದಿಯನ್ನು ನಮೂದು ಮಾಡಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿಯಲ್ಲಿ ತೋರಿಸಿರುವ ಚೆಕ್ಕುಬಂದಿಯ ಜಮೀನಿನಲ್ಲಿ ನಾನು ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಅ.ದಾ. 118/2021 ಪಿಡಬ್ಲ್ಯೂ-1

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.